# All India Radio: Bangalore
# National Bulletins In Kannada
# 18.05.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**18.05.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಇಸ್ರೋದಿಂದ ಇಒಎಸ್-೦೯ ಉಪಗ್ರಹ ಉಡಾವಣೆ; ಪಿಎಸ್‌ಎಲ್‌ವಿ -ಸಿ೬೧ ರಾಕೆಟ್‌ನ ಮೂರನೇ ಹಂತದ ಉಡಾವಣೆಯಲ್ಲಿ ತಾಂತ್ರಿಕ ದೋಷ

೨. ಬಾಂಗ್ಲಾದೇಶದಿಂದ ಭಾರತಕ್ಕೆ ಆಮದಾಗಲಿರುವ ಕೆಲವು ಸರಕುಗಳ ಮೇಲೆ ಹೊಸ ಬಂದರು ನಿರ್ಬಂಧ ಹೇರಿದ ವಿದೇಶಿ ವ್ಯಾಪಾರ ನಿರ್ದೇಶನಾಲಯ

೩. ಇಂದು ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ; ಎಎಸ್‌ಐ ನ ವಸ್ತುಸಂಗ್ರಹಾಲಯ ಹಾಗೂ ಸ್ಮಾರಕಗಳಿಗೆ ಉಚಿತ ಪ್ರವೇಶ

೪. ಐಪಿಎಲ್ ಟಿ-೨೦ ಕ್ರಿಕೆಟ್ - ಮಳೆಯಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು - ಕೊಲ್ಕತ್ತಾ ನೈಟ್ ರೈಡರ್ಸ್ ನಡುವಿನ ಪಂದ್ಯ ರದ್ದು

**<><*<><>*><>**

ಭಾರತೀಯ ಬಾಹ್ಯಾಕಾಶ ಕೇಂದ್ರ-ಇಸ್ರೋ ಇಂದು ಬೆಳಿಗ್ಗೆ ತನ್ನ ಬಾಹ್ಯಾಕಾಶ ಕಾರ್ಯಕ್ರಮದ ೧೦೧ ನೇ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಇಸ್ರೋದ **PSLV-C61** ರಾಕೆಟ್ ಇಂದು ಬೆಳಿಗ್ಗೆ ೫:೫೯ ಕ್ಕೆ ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭೂ ವೀಕ್ಷಣಾ ಉಪಗ್ರಹ **EOS-09** ನೊಂದಿಗೆ ಉಡಾವಣೆಯಾಯಿತು. ಈ ಕಾರ್ಯಾಚರಣೆಯು **EOS-09** ಅನ್ನು ಸೂರ್ಯ ಸಿಂಕ್ರೊನಸ್ ಧ್ರುವ ಕಕ್ಷೆಗೆ ಸೇರಿಸುತ್ತದೆ. ವಿವಿಧ ವಲಯಗಳಲ್ಲಿನ ಕಾರ್ಯಾಚರಣೆಯ ಅನ್ವಯಿಕೆಗಳಿಗೆ ನಿರಂತರ ಮತ್ತು ವಿಶ್ವಾಸಾರ್ಹ ದೂರಸ್ಥ ಸಂವೇದಿ ಡೇಟಾವನ್ನು ಒದಗಿಸಲು **EOS-09** ಅನ್ನು ವಿನ್ಯಾಸಗೊಳಿಸಲಾಗಿದೆ. ಈ ಕಾರ್ಯಾಚರಣೆಯು ಎಲ್ಲಾ ಹವಾಮಾನ ಪರಿಸ್ಥಿತಿಗಳಲ್ಲಿ ವಿವಿಧ ಭೂ ವೀಕ್ಷಣಾ ಅನ್ವಯಿಕೆಗಳಿಗೆ ಚಿತ್ರಗಳನ್ನು ಒದಗಿಸುವ ಸಾಮರ್ಥ್ಯವಿರುವ ಸಿಂಥೆಟಿಕ್ ಅಪರ್ಚರ್ ರಾಡಾರ್ ಪೇಲೋಡ್ ಅನ್ನು ಹೊಂದಿದೆ. ಈ ನಡುವೆ **PSLV-C61** ರಾಕೆಟ್ ತನ್ನ ಮೂರನೇ ಹಂತದ ಉಡಾವಣೆಯಲ್ಲಿ ತಾಂತ್ರಿಕ ದೋಷವನ್ನು ಎದುರಿಸಿತು. ತಾಂತ್ರಿಕ ಸಮಸ್ಯೆಗೆ ಕಾರಣಗಳನ್ನು ವಿಶ್ಲೇಷಿಸಲಾಗುವುದು ಎಂದು ಇಸ್ರೋ ಅಧ್ಯಕ್ಷ ಡಾ.ವಿ. ನಾರಾಯಣನ್ ಹೇಳಿದ್ದಾರೆ.

**<><*<><>*><>**

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತವು ಭಯೋತ್ಪಾದಕ ದಾಳಿಗಳಿಗೆ ಸೂಕ್ತ ಉತ್ತರ ನೀಡಿದೆ. ಇದು ಜಗತ್ತನ್ನು ಬೆರಗುಗೊಳಿಸಿದ್ದು, ಪಾಕಿಸ್ತಾನವನ್ನು ಭಯಭೀತಗೊಳಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಾದಿಸಿದ್ದಾರೆ. ಗುಜರಾತ್‌ನ ಗಾಂಧಿನಗರ ಮುನ್ಸಿಪಲ್ ಕಾರ್ಪೊರೇಷನ್ ಅಡಿಯಲ್ಲಿ ೭೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು. ನಂತರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಸಚಿವರು,

ಭಯೋತ್ಪಾದನಾ ಕೃತ್ಯಗಳಿಗೆ ಪ್ರತಿಕ್ರಿಯೆಯಾಗಿ ಭಾರತೀಯ ಸಶಸ್ತ್ರ ಪಡೆಗಳು ತೆಗೆದುಕೊಂಡ ನಿರ್ಣಾಯಕ ಕ್ರಮಗಳನ್ನು ಶ್ಲಾಘಿಸಿದರು. ಪಾಕಿಸ್ತಾನದಲ್ಲಿರುವ ಜೈಶ್-ಎ-ಮೊಹಮ್ಮದ್ ಮತ್ತು ಲಷ್ಕರ್-ಎ-ತೈಬಾದಂತಹ ಸಂಘಟನೆಗಳ ಭಯೋತ್ಪಾದಕ ಶಿಬಿರಗಳನ್ನು ಆಪರೇಷನ್ ಸಿಂಧೂರ್ ಮೂಲಕ ನಾಶಪಡಿಸುವ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಭಾರತೀಯ ನಾಗರಿಕರ ವಿರುದ್ಧ ಯಾವುದೇ ಭಯೋತ್ಪಾದಕ ಚಟುವಟಿಕೆ ನಡೆದರೆ, ನಮ್ಮ ಪ್ರತಿಕ್ರಿಯೆ ಎರಡು ಪಟ್ಟು ಬಲವಾಗಿರುತ್ತದೆ  ಎಂದು ಸಚಿವ ಅಮಿತ್ ಶಾ ಹೇಳಿದರು.

<><*<><>*><>

ಭಯೋತ್ಪಾದನೆ ವಿರುದ್ಧ ಸಮರ್ಥವಾದ ರಾಜಕೀಯ ಏಕತೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ನಿಲುವು ಸ್ಪಷ್ಟಪಡಿಸಲು "ಆಪರೇಷನ್ ಸಿಂಧೂರ" ಅಡಿಯಲ್ಲಿ ಭಾರತದ ಸರ್ವಪಕ್ಷ ನಿಯೋಗಗಳು ಹಲವು ಪ್ರಮುಖ ರಾಷ್ಟ್ರಗಳೊಂದಿಗೆ ತೊಡಗಿಸಿಕೊಳ್ಳಲಿವೆ. ಈ ಕುರಿತಂತೆ ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ  ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ದೇಶದ ಪ್ರಮುಖ ರಾಜಕೀಯ ಪಕ್ಷಗಳ ಸಂಸದರನ್ನು ಒಳಗೊಂಡ ಏಳು ನಿಯೋಗಗಳನ್ನು ವಿಶ್ವದ ವಿವಿಧ ಮಹತ್ವದ ರಾಷ್ಟ್ರಗಳಿಗೆ ಕಳುಹಿಸಲಾಗುತ್ತಿದೆ. ಈ ನಿಯೋಗಗಳ ಉದ್ದೇಶ, ಭಯೋತ್ಪಾದನೆ ವಿರುದ್ಧ ಜಾಗತಿಕ ಸಹಭಾಗಿತ್ವವನ್ನು ನಿರ್ಮಿಸಲು ಭಾರತ ಏಕತೆಯಿಂದ ಕಾರ್ಯನಿರ್ವಹಿಸುತ್ತಿರುವುದನ್ನು ತೋರಿಸುವುದಾಗಿದೆ ಎಂದಿದ್ದಾರೆ. ಮೊದಲ ನಿಯೋಗವನ್ನು ಬಿಜೆಪಿ ಸಂಸದೆ ಬೈಜಯಂತ್ ಪಾಂಡಾ ಅವರು ನೇತೃತ್ವ ವಹಿಸುತಿದ್ದು, ಈ ನಿಯೋಗ ಸೌದಿ ಅರೇಬಿಯಾ, ಬಹ್ರೇನ್, ಕುವೈತ್ ಮತ್ತು ಅಲ್ಜೀರಿಯಾ ರಾಷ್ಟ್ರಗಳಿಗೆ ಭೇಟಿಕೊಡಲಿದೆ. ಈ ನಿಯೋಗದಲ್ಲಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಹಾಗೂ ಎಐಎಂಐಎಂ ಸಂಸದ ಅಸದ್ದುದ್ದೀನ್ ಓವೈಸಿ ಕೂಡ ಭಾಗಿಯಾಗಿದ್ದಾರೆ. ಎರಡನೇ ನಿಯೋಗದ ನೇತೃತ್ವವನ್ನು ಮಾಜಿ ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ವಹಿಸುತಿದ್ದು, ಅವರು ಬ್ರಿಟನ್, ಫ್ರಾನ್ಸ್, ಜರ್ಮನಿ, ಐರೋಪ್ಯ ಒಕ್ಕೂಟ ರಾಷ್ಟ್ರಗಳು, ಇಟಲಿ ಮತ್ತು ಡೆನ್ಮಾರ್ಕ್ ಗೆ ಭೇಟಿ ಮಾಡಲಿದ್ದಾರೆ. ಮೂರನೇ ನಿಯೋಗವನ್ನು ಜೆಡಿಯು ಸಂಸದ ಸಂಜಯ್ ಕುಮಾರ್ ಝಾ ಅವರು ಮುನ್ನಡೆಸಲಿದ್ದು, ಇಂಡೋನೇಶಿಯಾ, ಮಲೇಶಿಯಾ, ದಕ್ಷಿಣ ಕೊರಿಯಾ, ಜಪಾನ್ ಮತ್ತು ಸಿಂಗಪುರ ದೇಶಗಳಿಗೆ ಭೇಟಿ ನೀಡಲಿದೆ. ಈ ನಿಯೋಗದಲ್ಲಿ ತೃಣಮೂಲ ಕಾಂಗ್ರೆಸ್‌ನ ಯೂಸುಫ್ ಪಠಾನ್ ಮತ್ತು ಸಿಪಿಐ-ಎಂ ಪಕ್ಷದ ಜಾನ್ ಬ್ರಿಟ್ಟಾಸ್ ಭಾಗವಾಗಿದ್ದಾರೆ. ನಾಲ್ಕನೇ ನಿಯೋಗವನ್ನು ಶಿವಸೇನೆ ಸಂಸದ ಶ್ರೀಕಾಂತ್ ಏಕನಾಥ್ ಶಿಂಧೆ ನೇತೃತ್ವ ವಹಿಸುತ್ತಿದ್ದು, ಯುಎಇ, ಲೈಬೀರಿಯಾ, ಕಾಂಗೋ ಮತ್ತು ಸಿಯೆರಾ ಲಿಯೋನ್ ರಾಷ್ಟ್ರಗಳಿಗೆ ತೆರಳಲಿದ್ದಾರೆ. ಈ ನಿಯೋಗದಲ್ಲಿ ಬಿಜೆಪಿ ನಾಯಕಿ ಬಂಸುರಿ ಸ್ವರಾಜ್ ಮತ್ತು ಬಿಜು ಜನತಾದಳದ ಸಸ್ಮಿತ್ ಪಾತ್ರ ಇದ್ದಾರೆ. ಐದನೇ ನಿಯೋಗವನ್ನು ಕಾಂಗ್ರೆಸ್ ಮುಖಂಡ ಶಶಿ ತರೂರ್ ನೇತೃತ್ವ ವಹಿಸಿದ್ದು, ಈ ನಿಯೋಗ ಅಮೆರಿಕ, ಪನಾಮಾ, ಗುಯಾನಾ, ಬ್ರೆಜಿಲ್ ಮತ್ತು ಕೊಲಂಬಿಯಾ ದೇಶಗಳಿಗೆ ಭೇಟಿಕೊಡಲಿದೆ.  ಆರನೇ ನಿಯೋಗವನ್ನು ಡಿಎಂಕೆ ಸಂಸದ ಕನಿಮೋಳಿ ಕಾರುನಾನಿಧಿ ಮುನ್ನಡೆಸಲಿದ್ದು, ಸ್ಪೇನ್, ಗ್ರೀಸ್, ಸ್ಲೋವೇನಿಯಾ, ಲಾಟ್ವಿಯಾ ಮತ್ತು ರಷ್ಯಾ ದೇಶಗಳಿಗೆ ಭೇಟಿ ನೀಡಲಿದೆ.  ಏಳನೇ ನಿಯೋಗವನ್ನು ಎನ್‌ಸಿಪಿ-ಎಸ್‌ಸಿಪಿ ಸಂಸದ ಸುಪ್ರಿಯಾ ಸುಲೆ ನೇತೃತ್ವ ವಹಿಸುತ್ತಿದ್ದು, ಈಜಿಪ್ಟ್, ಕತಾರ್, ಇಥಿಯೋಪಿಯಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳಿಗೆ ಭೇಟಿ ನೀಡಲಿದ್ದಾರೆ. ಈ ತಂಡದಲ್ಲಿ ಬಿಜೆಪಿ ಸಂಸದರು ರಾಜೀವ್ ಪ್ರತಾಪ್ ರೂಡಿ ಮತ್ತು ಅನುರಾಗ್ ಸಿಂಗ್ ಠಾಕುರ್, ಹಾಗೆಯೇ ಕಾಂಗ್ರೆಸ್‌ನ ಮನೀಶ್ ತಿವಾರಿ ಕೂಡ ಇದ್ದಾರೆ. ಈ ಎಲ್ಲ ನಿಯೋಗಗಳು ಭಾರತೀಯ ಸಂಸತ್ತಿನ ವಿವಿಧ ಪಕ್ಷಗಳಿಂದ ಆಯ್ಕೆಯಾಗಿರುವ ಸಂಸದರನ್ನು ಒಳಗೊಂಡಿದ್ದು, ಭಯೋತ್ಪಾದನೆಯಂತಹ ಜಾಗತಿಕ ಸವಾಲುಗಳ

ವಿರುದ್ಧ ಭಾರತವು ಏಕತೆಯಿಂದ ಮತ್ತು ನೈತಿಕ ದೃಢತೆಯಿಂದ ನಿಂತಿದೆ ಎಂಬ ಸಂದೇಶವನ್ನು ಅಂತರರಾಷ್ಟ್ರೀಯ ಸಮುದಾಯಕ್ಕೆ ತಲುಪಿಸಲು ಯೋಜಿಸಲಾಗಿದೆ. "ಆಪರೇಷನ್ ಸಿಂಧೂರ" ಭಾರತದಿಂದ ಜಗತ್ತಿಗೆ ಕಳಿಸಲಾಗುತ್ತಿರುವ ಶಾಂತಿ, ಭದ್ರತೆ ಮತ್ತು ಸಹಭಾಗಿತ್ವದ ಸ್ಪಷ್ಟ ಸೂಚನೆಯಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

<><*<><>*><>

ವಿದೇಶಿ ವ್ಯಾಪಾರ ನಿರ್ದೇಶನಾಲಯ, ಬಾಂಗ್ಲಾದೇಶದಿಂದ ಭಾರತಕ್ಕೆ ಕೆಲವು ಸರಕುಗಳ ಆಮದು ಮೇಲೆ ಹೊಸ ಬಂದರು ನಿರ್ಬಂಧಗಳನ್ನು ಪ್ರಕಟಿಸಿದೆ. ಈ ನಿರ್ಬಂಧಗಳು ಭಾರತದ ಮೂಲಕ ಸಾಗುವ ಮತ್ತು ನೇಪಾಳ ಹಾಗೂ ಭೂತಾನ್‌ಗೆ ಉದ್ದೇಶಿಸಲಾದ ಬಾಂಗ್ಲಾದೇಶದ ಸರಕುಗಳಿಗೆ ಅನ್ವಯಿಸುವುದಿಲ್ಲ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದೆ. ಅಧಿಸೂಚನೆಯ ಮೂಲಕ ಹೊರಡಿಸಲಾದ ನಿರ್ದೇಶನವು ತಕ್ಷಣದಿಂದ ಜಾರಿಗೆ ಬಂದಿದೆ. ಬಾಂಗ್ಲಾದೇಶದಿಂದ ಎಲ್ಲಾ ರೀತಿಯ ಸಿದ್ಧ ಉಡುಪುಗಳ ಆಮದು ಭೂ ಬಂದರುಗಳ ಮೂಲಕ ನಿಷೇಧಿಸಲ್ಪಡುತ್ತದೆ. ಆದಾಗ್ಯೂ, ಈ ಸರಕುಗಳನ್ನು ನವಾ ಶೇವಾ ಮತ್ತು ಕೋಲ್ಕತ್ತಾ ಬಂದರುಗಳ ಮೂಲಕ ಇನ್ನೂ ಅನುಮತಿಸಲಾಗುತ್ತದೆ. ಹೆಚ್ಚುವರಿಯಾಗಿ, ಹಣ್ಣು, ಹಣ್ಣಿನ ಸುವಾಸನೆಯ ಮತ್ತು ಕಾರ್ಬೋನೇಟೆಡ್ ಪಾನೀಯಗಳು, ಸಂಸ್ಕರಿಸಿದ ಆಹಾರ ಪದಾರ್ಥಗಳು, ಹತ್ತಿ ಮತ್ತು ಹತ್ತಿ ನೂಲು ತ್ಯಾಜ್ಯ, ವರ್ಣದ್ರವ್ಯಗಳು, ಬಣ್ಣಗಳು, ಪ್ಲಾಸ್ಟಿಸೈಜರ್‌ಗಳು ಮತ್ತು ದೇಶೀಯ ಕೈಗಾರಿಕೆಗಳಿಗೆ ಇನ್‌ಪುಟ್‌ಗಳಾಗಿ ಬಳಸುವ ಕಣಗಳು ಮತ್ತು ಮರದ ಪೀಠೋಪಕರಣಗಳನ್ನು ಹೊರತುಪಡಿಸಿ ಪ್ಲಾಸ್ಟಿಕ್ ಮತ್ತು ಪಿವಿಸಿ ಸಿದ್ಧಪಡಿಸಿದ ಸರಕುಗಳ ಆಮದು ನಿರ್ಬಂಧಿಸಲಾಗುತ್ತದೆ. ಈ ಸರಕುಗಳನ್ನು ಅಸ್ಸಾಂ, ಮೇಘಾಲಯ, ತ್ರಿಪುರ, ಮಿಜೋರಾಂನಲ್ಲಿರುವ ಯಾವುದೇ ಭೂ ತೆರಿಗೆ ಕೇಂದ್ರಗಳು ಅಥವಾ ಇಂಟಿಗ್ರೇಟೆಡ್ ಚೆಕ್ ಪೋಸ್ಟ್‌ಗಳು ಹಾಗೂ ಪಶ್ಚಿಮ ಬಂಗಾಳದ ಚಂಗ್ರಬಂಧ ಮತ್ತು ಫುಲ್ಬರಿಯಲ್ಲಿರುವ ಗಡಿರೇಖೆಯ ಮೂಲಕ ಅನುಮತಿಸಲಾಗುವುದಿಲ್ಲ. ಆದಾಗ್ಯೂ, ಹೊಸ ಬಂದರು ನಿರ್ಬಂಧಗಳು ಬಾಂಗ್ಲಾದೇಶದಿಂದ ಮೀನು, ಎಲ್‌ಪಿಜಿ, ಖಾದ್ಯ ತೈಲ ಮತ್ತು ಪುಡಿಮಾಡಿದ ಕಲ್ಲುಗಳ ಆಮದಿಗೆ ಅನ್ವಯಿಸುವುದಿಲ್ಲ.

<><*<><>*><>

ಇಂದು ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ. ಈ ಸಂದರ್ಭದಲ್ಲಿ ದೇಶಾದ್ಯಂತದ ಎಲ್ಲಾ ಎಎಸ್‌ಐ ಸ್ಮಾರಕಗಳು ಮತ್ತು ವಸ್ತುಸಂಗ್ರಹಾಲಯಗಳಿಗೆ ಪ್ರವೇಶ ಉಚಿತ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ - ಎಎಸ್‌ಐ ಘೋಷಿಸಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯವು ಎಎಸ್‌ಐ ೫೨ ವಸ್ತುಸಂಗ್ರಹಾಲಯಗಳು ಮತ್ತು ಎಲ್ಲಾ ಸ್ಮಾರಕಗಳಿಗೆ ಉಚಿತ ಪ್ರವೇಶನ್ನು ಒದಗಿಸಲಿದೆ. ಇದು ವ್ಯಾಪಕ ಸಾರ್ವಜನಿಕ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಭಾರತದಾದ್ಯಂತದ ಎಎಸ್‌ಐ ತಾಣಗಳು ಇತಿಹಾಸಪೂರ್ವ ಉಪಕರಣಗಳು ಮತ್ತು ಶಿಲ್ಪಗಳಿಂದ ಹಿಡಿದು ಮಧ್ಯಕಾಲೀನ ಶಾಸನಗಳವರೆಗೆ ಮತ್ತು ಇನ್ನೂ ಹೆಚ್ಚಿನವುಗಳನ್ನು ಒಳಗೊಂಡ ದೇಶದ ಕೆಲವು ಅಮೂಲ್ಯವಾದ ಪುರಾತತ್ವ ಸಂಪತ್ತನ್ನು ಹೊಂದಿವೆ. ಜನರು ರಾಷ್ಟ್ರದ ಇತಿಹಾಸ ಮತ್ತು ಪರಂಪರೆಯೊಂದಿಗೆ ಮರುಸಂಪರ್ಕಿಸಲು ಅರ್ಥಪೂರ್ಣ ಅವಕಾಶವನ್ನು ಇದು ಒದಗಿಸಲಿದೆ.

<><*<><>*><>

ಭಾರತವು ಆರ್ಥಿಕ ಬೆಳವಣಿಗೆ, ತ್ವರಿತ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಅಂತರರಾಷ್ಟ್ರೀಯ ಪಾಲುದಾರಿಕೆಗಳನ್ನು ಬಲಪಡಿಸುವ ಮೂಲಕ ಜಾಗತಿಕ ವೇದಿಕೆಯಲ್ಲಿ ಗುರುತಿಸಲ್ಪಟ್ಟಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಬ್ರೆಜಿಲ್‌ನ ಸಾವೊ ಪಾಲೊದಲ್ಲಿ ಭಾರತೀಯ ವಲಸೆ ಸಮುದಾಯದೊಂದಿಗೆ ನಡೆದ ಸಂವಾದದ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಭಾರತದಲ್ಲಿನ ವಿಶಾಲ ಹೂಡಿಕೆ ಮತ್ತು ನಾವೀನ್ಯತೆ ಅವಕಾಶಗಳು, ವಿಶೇಷವಾಗಿ ಜೈವಿಕ ಇಂಧನಗಳು, ಹಸಿರು ಹೈಡ್ರೋಜನ್, ಶುದ್ಧ ಇಂಧನ ಮತ್ತು ಫ್ಲೆಕ್ಸ್-ಇಂಧನ ಕುರಿತಂತೆ ಪ್ರಸ್ತಾಪಿಸಿದರು. ಸಮುದಾಯದ ಆಳವಾಗಿ ಬೇರೂರಿರುವ ಸಾಂಸ್ಕೃತಿಕ ಮೌಲ್ಯಗಳು ಮತ್ತು ನಾವೀನ್ಯತೆ, ಕೃಷಿ-ವ್ಯವಹಾರ, ಇಂಧನ ಮತ್ತು ಡಿಜಿಟಲ್ ಸಹಯೋಗದ ಮೂಲಕ ಭಾರತ-ಬ್ರೆಜಿಲ್ ಸಂಬಂಧಗಳನ್ನು ಮುನ್ನಡೆಸುವಲ್ಲಿ ಉಭಯ ದೇಶಗಳ ಪಾತ್ರವನ್ನು ಇದೇ ವೇಳೆ ಸಚಿವರು ಶ್ಲಾಘಿಸಿದರು.

**<><*<><>*><>**

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರಿಡಾಂಗಣದಲ್ಲಿ ಕಳೆದ ರಾತ್ರಿ ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳ ನಡುವಿನ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯ ಮಳೆಯಿಂದಾಗಿ ಒಂದೂ ಎಸೆತ ಕಾಣದೆ ರದ್ದುಗೊಂಡಿತು. ಈ ಹಿನ್ನೆಲೆ ಉಭಯ ತಂಡಗಳು ತಲಾ ಒಂದು ಅಂಕ ಪಡೆದಿದ್ದು, ೧೨ ಪಂದ್ಯಗಳಲ್ಲಿ ೮ ರಲ್ಲಿ ಗೆದ್ದು ೧೭ ಅಂಕದೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿರುವ ಬೆಂಗಳೂರು ತಂಡ, ಪ್ಲೇ ಆಫ್ ಹಂತಕ್ಕೇರಲು ಮತ್ತಷ್ಟು ಸನ್ನಿಹಿತವಾಗಿದೆ. ಈ ನಡುವೆ ೧೩ ಪಂದ್ಯಗಳಲ್ಲಿ ಕೇವಲ ೫ ರಲ್ಲಿ ಗೆದ್ದು ೧೨ ಅಂಕ ಗಳಿಸಿರುವ ಕೋಲ್ಕತ್ತಾ ತಂಡ ಟೂರ್ನಿಯಿಂದ ಹೊರಬಿದ್ದಿದೆ. ಇಂದು ಎರಡು ಪಂದ್ಯಗಳು ನಡೆಯುತ್ತಿದ್ದು, ಜೈಪುರದಲ್ಲಿ ನಡೆಯಲಿರುವ ದಿನದ ಮೊದಲ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಅಪರಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೭.೩೦ಕ್ಕೆ ಆರಂಭವಾಗಲಿದೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>**ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ **<>*><>**